ದಿಃ **23.12.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಶ್ರೀ.ವಿ.ಜಿ.ವಾಯ್ ವಕೀಲರಿಂದಃ ಅರ್ಜಿದಾರರ ಪರವಾಗಿಃ

**9)** **2019-20** ನೇ ಸಾಲಿನ ಆದಾಯ ತೆರಿಗೆ ತುಂಬಿದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-**9** ಎಂದು ಗುರುತಿಸಲಾಯಿತು. **2020-21** ನೇ ಸಾಲಿನ ಆದಾಯ ತೆರಿಗೆ ತುಂಬಿದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-**10** ಎಂದು ಗುರುತಿಸಲಾಯಿತು. **2021-22** ನೇ ಸಾಲಿನ ಆದಾಯ ತೆರಿಗೆಯ ತುಂಬಿದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-**11** ಎಂದು ಗುರುತಿಸಲಾಯಿತು. **2022-23** ನೇ ಸಾಲಿನ ಆದಾಯ ತೆರಿಗೆಯ ತುಂಬಿದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-**12** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ.ವಿ.ಎಸ್ .ಎ ವಕೀಲರಿಂದಃ**3** ನೇ ಎದುರುದಾರರ ಪರವಾಗಿಃ

**10)** ಅಪಘಾತದಲ್ಲಿ ಮೃತಪಟ್ಟ ಅರುಣಕುಮಾರ ಇವರು ನನಗೆ ಗಂಡನಾಗಬೇಕು ಅಂದರೆ ಸರಿ. ನನಗೆ ಇಬ್ಬರು ಮಕ್ಕಳು ಇರುತ್ತಾರೆ, ಅವರಲ್ಲಿ **2** ನೇ ಅರ್ಜಿದಾರ ಕುಮಾರಿ ಗೌತಮಿ ಮತ್ತು ಮಗನಾದಂತಹ ಅಖಿಲೇಶ ಅಂತಾ ಇರುತ್ತಾರೆ. ಈ ಅರ್ಜಿಯಲ್ಲಿಯ **2** ನೇ ಎದುರುದಾರನಾದಂತಹ ಅಖಿಲೇಶ ಈತನು ನನಗೆ ಮಗನಾಗಬೇಕು ಅಂದರೆ ಸರಿ. ನನ್ನ ಗಂಡನಾದ ಅರುಣಕುಮಾರ ಇವರ ತಂದೆ ತಾಯಿ ಅಂದರೆ ನನ್ನ ಅತ್ತೆ, ಮಾವ ಮೃತಪಟ್ಟಿರುತ್ತಾರೆ. ಅಪಘಾತವಾದಾಗ ನನ್ನ ಗಂಡನಿಗೆ **47** ರಿಂದ **48** ವರ್ಷ ವಯಸ್ಸು ಇತ್ತು ಅಂದರೆ ಸರಿಯಲ್ಲ, ಆದರೆ ಅವರಿಗೆ **49** ವರ್ಷ ವಯಸ್ಸು ಇತ್ತು. ನನ್ನ ಗಂಡನ ಹೆಸರಿನಲ್ಲಿ ಹೊಸರಿತ್ತಿ ಗ್ರಾಮದಲ್ಲಿ ಪೆಟ್ರೋಲ್ ಪಂಪ ಇದ್ದು ಮತ್ತು ಹೊಸರಿತ್ತಿ ಗ್ರಾಮದಲ್ಲಿ ರೇಷ್ಮೆ ವ್ಯವಸಾಯ ಮಾಡುತ್ತಿದ್ದರು, ಆ ಕುರಿತಾಗಿ ಆ ವ್ಯವಸಾಯ ಮಾಡುತ್ತಿದ್ದರು ಮತ್ತು ಪ್ರೇರಣಾ ಇಂಗ್ಲೀಷ ಮಿಡಿಯಂ ಶಾಲೆ ಹೊಸರಿತ್ತಿಯಲ್ಲಿ ಇರುವಂತಹ ಸದರಿ ಶಾಲೆಯಲ್ಲಿ ಅವರು ಟ್ರಸ್ಟಿ ಮತ್ತು

ಸೆಕ್ರೆಟರಿ ಆಗಿ ಕೆಲಸ ನಿರ್ವಹಿಸಿರುತ್ತಾರೆ. ಸದರಿ ಹೊಸರಿತ್ತಿ ಗ್ರಾಮದಲ್ಲಿರುವ ನನ್ನ ಗಂಡನ ಹೆಸರಿನಲ್ಲಿರುವ ಪೆಟ್ರೋಲ್ ಬಂಕ ಇವತ್ತಿಗೂ ಸಹ ನಡೆಯುತ್ತಿದೆ ಅಂದರೆ ಸರಿ.

**11)** ನನ್ನ ಗಂಡ ಅರುಣಕುಮಾರ ಈತನ ಜೀವಿತ ಕಾಲದಲ್ಲಿ ಯಾವ ರೀತಿ ಪೆಟ್ರೋಲ್ ಪಂಪನ ವ್ಯಾಪಾರ ನಡೆಯುತ್ತಿತ್ತು, ಈಗಲೂ ಸಹ ಅದೇ ರೀತಿ ವ್ಯಾಪಾರ ನಡೆಯುತ್ತಿದೆ ಅಂದರೆ ಸರಿಯಲ್ಲ, ಆದರೆ ಈಗ ವ್ಯಾಪಾರ ಸ್ವಲ್ಪ ಕಡಿಮೆಯಾಗಿರುತ್ತದೆ. ನನ್ನ ಗಂಡ ಅಪಘಾತದಲ್ಲಿ ಮೃತಪಟ್ಟ ನಂತರ ಆತನ ಹೆಸರಿನಲ್ಲಿದ್ದ ಪೆಟ್ರೋಲ್ ಪಂಪನಲ್ಲಿ ಆದಂತಹ ಆದಾಯದಲ್ಲಿ ನಾನು ಆ ಕುರಿತಾಗಿ ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲ. ನನ್ನ ಗಂಡ ಅರುಣಕುಮಾರ ಈತನ ಹೆಸರಿನಲ್ಲಿ ಹೊಸರಿತ್ತಿ ಗ್ರಾಮದಲ್ಲಿ **5** ಎಕರೆ ಕೃಷಿ ಜಮೀನು ಇರುತ್ತದೆ , ಅದು ನೀರಾವರಿ ಜಮೀನು ಇರುತ್ತದೆ. ಇವತ್ತಿಗೂ ಸಹ ಸದರಿ ಜಮೀನಿನಲ್ಲಿ ನೀರಾವರಿ ಕೃಷಿ ಮಾಡಿ ಬೆಳೆ ತೆಗೆಯುತ್ತಿದ್ದೇವೆ ಅಂದರೆ ಸರಿ. ಆ ರೀತಿ ಪೆಟ್ರೋಲ್ ಪಂಪನಿಂದ ಬಂದಂತಹ ಉತ್ಪನ್ನದಿಂದ ಮತ್ತು ಕೃಷಿ ಬೆಳೆಯಿಂದ ಬಂದಂತಹ ಉತ್ಪನ್ನದಿಂದ ನಾವು ನಮ್ಮ ಕುಟುಂಬವನ್ನು ನಡೆಸಿಕೊಂಡು ಹೋಗುತ್ತಿದ್ದೇವೆ ಅಂದರೆ ಸರಿ.

**12)** ಅಪಘಾತವಾದ ಸಮಯದಲ್ಲಿ ನನ್ನ ಗಂಡ ಮಹೀಂದ್ರಾ ಎಕ್ಸಯುವಿ-**500** ಕಾರನಲ್ಲಿ ಪ್ರಯಾಣ ಮಾಡುತ್ತಿದ್ದರು ಅಂದರೆ ಸರಿ. ಅಪಘಾತವಾದ ಸಮಯದಲ್ಲಿ ಸದರಿ ವಾಹನವನ್ನು ನನ್ನ ಮಗನಾದ ಅಖಿಲೇಶ **2** ನೇ ಎದುರುದಾರ ಈತನು ಆ ವಾಹನವನ್ನು ನಡೆಸುತ್ತಿದ್ದ ಅಂದರೆ ಸರಿ. ಶ್ರೀಮತಿ ವಿಜಯಲಕ್ಷ್ಮೀ ಚೆನ್ನವೀರಪ್ಪ ಶೆಟ್ಟರ ಇವರು ನನಗೆ ಅತ್ತೆಯಾಗಬೇಕು. ಅವರು ಸದರಿ ಅಪಘಾತದಲ್ಲಿ ಭಾಗಿಯಾದಂತಹ ಮಹೀಂದ್ರಾ ಎಕ್ಸಯುವಿ-**500** ಕಾರಿನ ಮಾಲೀಕರು ಆಗಿರುತ್ತಾರೆ ಅಂದರೆ ಸರಿ. ಇದೇ ಅಪಘಾತದಲ್ಲಿ ನನ್ನ ಅತ್ತೆಯಾದಂತಹ ಶ್ರೀಮತಿ ವಿಜಯಲಕ್ಷ್ಮೀ ಇವರು ಮೃತಪಟ್ಟಿರುತ್ತಾರೆ. ನನ್ನ ಅತ್ತೆಗೆ ಇಬ್ಬರೂ ಮಕ್ಕಳು ಇರುತ್ತಾರೆ, ಅದರಲ್ಲಿ ಒಬ್ಬ ನನ್ನ ಗಂಡ ಅರುಣಕುಮಾರ ಹಾಗೂ ಅವರ ಸಹೋದರರಾದ ಸಿದ್ದರಾಮ ಶೆಟ್ಟರ ಅಂತಾ ಇರುತ್ತಾರೆ.

**13)** ಅಪಘಾತದಲ್ಲಿ ಭಾಗಿಯಾದಂತಹ ಮಹೀಂದ್ರಾ ಎಕ್ಸಯುವಿ-**500** ಈ ಕಾರಿನ ಮಾಲೀಕರು **1** ನೇ ಎದುರುದಾರರದಂತಹ ನನ್ನ ಅತ್ತೆಯಾದಂತಹ ಶ್ರೀಮತಿ ವಿಜಯಲಕ್ಷ್ಮೀ ಇವರು ಮಾಲೀಕರಾಗಿದ್ದರಿಂದ ಅವರು ಅಪಘಾತದಲ್ಲಿ ಮೃತಪಟ್ಟ

ನಂತರ ವಾರಸಾ ನಾತೆಯಿಂದ ನನ್ನ ಗಂಡ ಅರುಣಕುಮಾರ ಹಾಗೂ ಅವರ ಸಹೋದರನಾದಂತಹ ಸಿದ್ದರಾಮ ಶೆಟ್ಟರ ಮಾಲೀಕರು ಆಗುತ್ತಾರೆ ಅಂದರೆ ಸರಿಯಲ್ಲ, ಏಕೆಂದರೆ ನಾವು ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬರುತ್ತಿದ್ದೇವೆ ಎಂದು ಉತ್ತರಿಸಿದ್ದಾರೆ. ನನ್ನ ಗಂಡನಾದಂತಹ ಅರುಣಕುಮಾರ ಮತ್ತು ಆತನ ಸಹೋದರನಾಂದಂತಹ ಸಿದ್ದರಾಮಶೆಟ್ಟರ ಇಬ್ಬರೂ ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬರುತ್ತಿದ್ದಾರೆ ಎಂದು, ನಾನು ಸಲ್ಲಿಸಿದ ಮುಖ್ಯ ವಿಚಾರಣೆಯಲ್ಲಿ ಮತ್ತು ಅರ್ಜಪಿಯಲ್ಲಿ ನಮೂದು ಮಾಡಿಲ್ಲ ಅಂದರೆ ಸರಿ. ಈ ಅಪಘಾತದಲ್ಲಿ ನನ್ನ ಗಂಡನಾದಂತಹ ಅರುಣಕುಮಾರ ಇವರು ಮೃತಪಟ್ಟ ನಂತರ ನಾವು ಅವರ ವಾರಸುದಾರರಾಗಿ ನನ್ನ ಮಗಳಾದಂತಹ ಕುಮಾರಿ ಗೌತಮಿ ಮತ್ತು **2** ನೇ ಎದುರುದಾರ ಅಖಿಲೇಶ ಮೂರು ಜನ ವಾರಸುದಾರರಾಗುತ್ತೇವೆ ಅಂದರೆ ಸರಿಯಲ್ಲ.

**14)** ಈಗ ಪ್ರಸ್ತುತವಾಗಿ ಅಪಘಾತದಲ್ಲಿ ಭಾಗಿಯಾದಂತಹ ಮಹೀಂದ್ರಾ ಎಕ್ಸ್‌ಯುವಿ-**500** ಕಾರಿನ ಸಂಪೂರ್ಣ ಮಾಲೀಕಳಾಗಿರುತ್ತೇನೆ ಅಂದರೆ ಸರಿಯಲ್ಲ, ಸದರಿ ವಾಹನವು ಈಗ ಪ್ರಸ್ತುತವಾಗಿ ನನ್ನ ಗಂಡನಾದಂತಹ ಅರುಣಕುಮಾರ ಇವರ ಸಹೋದರನಾದ ಸಿದ್ದರಾಮ ಶೆಟ್ಟರ ಇವರ ಹೆಸರಿನಲ್ಲಿ ಇರುತ್ತದೆ. ಕಾನೂನು ಪ್ರಕಾರವಾಗಿ ಅಪಘಾತದಲ್ಲಿ ಭಾಗಿಯಾದಂತಹ ವಾಹನ ಮಹೀಂದ್ರಾ ಎಕ್ಸ್‌ಯುವಿ-**500** ಕಾರಿಗೆ ನಾನು ಮಾಲೀಕಳಾಗಿದ್ದರು ಸಹ ನಾನು ಈ ಪ್ರಕರಣದಲ್ಲಿ ಆದಂತಹ ಅಪಘಾತದಲ್ಲಿ ವಿಮೆ ಪರಿಹಾರ ಪಡೆಯಲು ನನ್ನ ಗಂಡನ ಸಹೋದರನಾದಂತಹ ಸಿದ್ದರಾಮ ಶೆಟ್ಟರ ಈತನ ಹೆಸರಿನಲ್ಲಿ ವರ್ಗಾವಣೆ ಮಾಡಲಾಗಿದೆ ಅಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ಅಪಘಾತದಲ್ಲಿ ಭಾಗಿಯಾದ ಮಹೀಂದ್ರಾ ಎಕ್ಸ್‌ಯುವಿ-**500** ಕಾರು **3** ನೇ ಎದುರುದಾರ ವಿಮೆ ಕಂಪನಿಯಲ್ಲಿ ವಿಮೆ ಪಾಲಿಸಿ ಹೊಂದಿತ್ತು ಅಂದರೆ ಸರಿ.

**15)** ಆದ್ದರಿಂದ ಅಪಘಾತದಲ್ಲಿ ಭಾಗಿಯಾದ ವಾಹನಕ್ಕೆ ಸಂಬಂದಪಟ್ಟಂತೆ ಇರುವ ವಿಮೆ ಪಾಲಿಸಿ ಪ್ರಕಾರ ನನಗೆ ನನ್ನ ಮುಖ್ಯ ಅರ್ಜಿಯಲ್ಲಿ ಕೇಳಿದಂತಹ ವಿಮೆ ಪರಿಹಾರ ಪಡೆಯಲು ಬರುವದಿಲ್ಲ ಅಂದರೆ ಸರಿಯಲ್ಲ. ನನ್ನ ಗಂಡ ಅರುಣಕುಮಾರ ಅಪಘಾತವಾದ ನಂತರ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ನನ್ನ ಗಂಡ ಕುಳಿತುಕೋಂಡ ಹೊರಟಂತಹ ವಾಹನ ಮತ್ತು ಟ್ರ್ಯಾಕ್ಟರ ನಡುವೆ ಅಪಘಾತವಾಗಿತ್ತು

ಅಂದರೆ ಸರಿ. ನನ್ನ ಮಗನಾದ **2** ನೇ ಎದುರುದಾರ ನಡೆಸಿಕೊಂಡು ಹೊರಟಂತಹ ಮಹೀಂದ್ರಾ ಎಕ್ಸಯುವಿ-**500** ಕಾರ ಎದುರಿಗೆ ಹೊರಟಂತಹ ಟ್ರ್ಯಾಕ್ಟರನ ಚಾಲಕನು ಯಾವುದೇ ಚಿಹ್ನೆಗಳನ್ನು ತೋರಿಸದೇ ಏಕಾಏಕಿಯಾಗಿ ನಿಲ್ಲಿಸಿದ್ದರಿಂದ ಈ ಅಪಘಾತ ಆಗಿರುತ್ತದೆ ಅಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಮಗನಾದ ಅಖಿಲೇಶ ಇತನ ಯಾವುದೇ ತಪ್ಪು ಇರುವದಿಲ್ಲ. ನಾನು ಈ ಪ್ರಕರಣದಲ್ಲಿ ಈ ದಿವಸ ಹಾಜರುಪಡಿಸಿದ ಎಲ್ಲ ಆದಾಯ ತೆರಿಗೆ ದಾಖಲಾತಿಗಳನ್ನು ಪ್ರಕರಣಕ್ಕೆ ಪೂರಕವಾಗುವಂತೆ ಸುಳ್ಳಾಗಿ ತಯಾರಿಸಿ ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ. ನಾನು ಸಹ ಅಪಘಾತದಲ್ಲಿ ಭಾಗಿಯಾದಂತಹ ಮಹೀಂದ್ರಾ ಎಕ್ಸಯುವಿ-**500** ಕಾರಿನ ಕಾಯ್ದೆಬದ್ದ ಮಾಲೀಕಳಾಗಿರುವದರಿಂದ ನಾನು ಈ ಅರ್ಜಿಯಲ್ಲಿ ಕೇಳಿದಂತೆ ಪರಿಹಾರ ಪಡೆಯಲು ಬಾದ್ಯಸ್ಥಳಾಗುವದಿಲ್ಲ ಅಂದರೆ ಸರಿಯಲ್ಲ. **3** ನೇ ಎದುರುದಾರ ವಿಮೆ ಕಂಪನಿಯವರು ನಮಗೆ ಪರಿಹಾರ ಬಾದ್ಯಸ್ಥರಾಗುವದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ,ಹಾವೇರಿ.